# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ** 5037/2023 ಫ್ರಾಸಾ-30
ಚಾಸಾ-33

ದಿನಾಂಕಃ 30-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಮುತ್ತುರಾಜು |
| **ತಂದೆಯ / ಗಂಡನ ಹೆಸರು** | ಲಿಂಗಣ್ಣ |
| **ವಯಸ್ಸು** | 52 |
| **ಉದ್ಯೋಗ** | ಪಿ.ಡಿ.ಒ. ಬೂದಿಬೆಟ್ಟ ಗ್ರಾಮ ಪಂಚಾಯಿತಿ, |
| **ವಾಸಸ್ಥಳ** | ಲಿಂಗದಹಳ್ಳಿ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

**ನಾನು 2021 ರಿಂದ ಇಲ್ಲಿಯವರೆಗೂ ಪಿ.ಡಿ.ಒ. ಆಗಿ ಬೂದಿಬೆಟ್ಟ ಗ್ರಾಮ ಪಂಚಾಯಿತಿ, ಕರ್ತವ್ಯ ನಿರ್ವಹಿಸುತ್ತಿದ್ದೇನೆ.**

9 ನೇ ತಿಂಗಳು 2023 ನೇ ಇಸವಿಯಲ್ಲಿ ವೃತ್ತ ನಿರೀಕ್ಷಕರು ಪಾವಗಡ ರವರು ಕೃತ್ಯ ನಡೆದ ಮನೆ ಲಕ್ಷ್ಮೀದೇವಮ್ಮ ಕೋಂ ಜಯರಾಮಪ್ಪ ರವರ ಮನೆಯ ಮುಂಭಾಗದ ಹೊರಗಾಂಣದ ದಾಖಲಾತಿಗಳನ್ನು ಕೋರಿ ಮನವಿ ಕೊಟ್ಟಿದ್ದು ಅದರಂತೆ ದಾಖಲೆಗಳನ್ನು ಪರಿಶೀಲಿಸಿ ಸದರಿ ಜಾಗ ಲಕ್ಷ್ಮೀದೇಮ್ಮ ಕೋಂ ಜಯರಾಮಪ್ಪ ರವರ ಹೆಸರಿನಲ್ಲಿ ಇದೆ ಎಂದು ಡಿಮ್ಯಾಂಡ್ ರಿಸ್ಟರ್ ಎಕ್ಸ್ರಾಕ್ ನ್ನು ಕವಚ ಪತ್ರದೊಂದಿಗೆ ವೃತ್ತ ನಿರೀಕ್ಷಕರಿಗೆ ಕಳುಹಿಸಿಕೊಟ್ಟಿರುತ್ತೇನೆ. ನ್ಯಾಯಾಲಯದಲ್ಲಿರುವ ಕವಚ ಪತ್ರ ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಕವಚ ಪತ್ರವನ್ನು ನಿಪಿ-31 ಎಂದು, ಸಾಕ್ಷಿ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು. ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ರಾಕ್ಟ್ ನ್ನು ನಿಪಿ-32 ಎಂದು , ಸಾಕ್ಷಿ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು.

**<u>ಪಾಟೀಸವಾಲು,ಶ್ರೀ. ಪಿ.ಎನ್.ಆರ್. ವಕೀಲರಿಂದ ಆರೋಪಿ ಪರವಾಗಿ:-</u>**

ನಾನು ಲಕ್ಷ್ಮೀದೇಮ್ಮ ರವರ ಮನೆ ಹತ್ತಿರ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮನೆ ಮತ್ತು ಹೊರಾಂಡ ವಿಸ್ತೀರ್ಣ ಎಷ್ಟು ಇರುತ್ತದೆ ಎಂದು ಪರಿಶೀಲಿಸಿರುವುದಿಲ್ಲ. ನಾನು ಸ್ಥಳಕ್ಕೆ ಹೋದ ಬಗ್ಗೆ ಪಂಚನಾಮೆ ಮಾಡಿರುವುದಿಲ್ಲ. ಸ್ಥಳದ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ನಿಪಿ-3 ಮತ್ತು 4 ರಲ್ಲಿ ಕಾಣಿಸುತ್ತಿರುವ ಮನೆಗೆ ನಾನು ಆ ದಿನ ಬೇಟಿ ಕೊಟ್ಟಿರುತ್ತೇನೆ. ನಿಪಿ-3 ಮತ್ತು 4 ರಲ್ಲಿ ಶವದ ತಲೆ ರಸ್ತೆ ಮೇಲೆ ಬಿದ್ದಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಾಗ ಲಕ್ಷ್ಮೀದೇವಮ್ಮ ರವರ ಮನೆಗೆ ಸಂಬಂಧಿಸಿದ್ದು ಇರುತ್ತದೆ. ನಾನು ಸ್ಥಳಕ್ಕೆ ಹೋದಾಗ ನಿಪಿ-3 ಮತ್ತು 4 ರಲ್ಲಿ ಕಾಣುತ್ತಿರುವ ಕಲ್ಲು ಬಂಡೆಗಳು ಹಾಗೆ ಇದ್ದವು.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**